## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

## ಸಿ.ಸಿ.ನಂ.20/2024

ಚಾಸಾ: 1 ಪ್ರಾಸಾ:1

ದಿನಾಂಕಃ 17.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ರಘು.ಬಿ

ತಂದೆಯ ಹೆಸರು– ಡಿ. ವೆಂಕಟೇಶಯ್ಯ

ವಯಸ್ಸು – 43 ವರ್ಷ

ಉದ್ಯೋಗ– ಆಹಾರ ನಿರೀಕ್ಷಕರು

ವಾಸ– ಕೋಲಾರ

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು 2020 ರಿಂದ ಈವರೆಗೂ ಆಹಾರ ನಿರೀಕ್ಷಕರಾಗಿ ಕೆಜಿಎಫ್ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 24.06.2025 ರಲ್ಲಿ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಮ್ಮ ಮೇಲಾಧಿಕಾರಿಯಾದ ಟಿ.ಎಂ.ಮಲ್ಲಿಕಾರ್ಜುನ್ ರವರಿಗೆ ಕೆಜಿಎಫ್ ನ 4 ನೇ ಕ್ರಾಸ್ ನಲ್ಲಿನ ಅಕ್ರಮವಾಗಿ ಎಲ್.ಪಿ.ಜಿ. ಗ್ಯಾಸ್ ಸಿಲಿಂಡರ್ ರೀಫೀಲಿಂಗ್ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯ ಮೇರೆಗೆ ನಮ್ಮ ಮೇಲಾಧಿಕಾರಿಯವರು ನಮ್ಮನ್ನು ಮತ್ತು ಚಾಸಾ–2 ರವರನ್ನು ದಾಳಿ ಮಾಡುವ ಸಲುವಾಗಿ ನೇಮಿಸಿದ್ದರು.

3. ನಂತರದಲ್ಲಿ ಅದೇ ದಿನ ನಾವು ಸಂಜೆ 4.30 ಗಂಟೆ ಸಮಯದಲ್ಲಿ ಪೋಲೀಸಿನವರ ಸಹಾಯದೊಂದಿಗೆ ಸ್ಥಳಕ್ಕೆ ಭೇಟಿ ನೀಡಿರುತ್ತೇವೆ. ನಾವು ಎಸ್.ಎಸ್. ಫ್ಯೂಷನ್ ಅಂಗಡಿಗೆ ಭೇಟಿ ನೀಡಿರುತ್ತೇವೆ. ಸದರಿ ಸ್ಥಳದಲ್ಲಿ 2 ಖಾಲಿ ಸಿಲಿಂಡರ್, ರೀಫೀಲಿಂಗ್ ಮೆಷಿನ್ ಮತ್ತು ತೂಕದ ಯಂತ್ರ ಇತ್ತು. ಸದರಿ ವಸ್ತುಗಳನ್ನು ಪೋಲಿಸಿನವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪಂಚರಾದ ಚಾಸಾ–4 ಮತ್ತು 5 ರವರೂ ಕೂಡ ಇದ್ದರು. ಪೋಲೀಸಿನವರು ಮಹಜರ್ ನ್ನು ಸಂಜೆ 4.30 ರಿಂದ 5.30 ಗಂಟೆವರೆಗೆ ಮಾಡಿರುತ್ತಾರೆ. ಸದರಿ ಮಹಜರ್ ನ್ನು ನಾನೇ ಬರೆದಿರುತ್ತೇನೆ. ಮಹಜರ್ ನ್ನು ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಸಂಜೆ 6.00 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೀಡುವ ಸಮಯದಲ್ಲಿ ಅಮಾನತ್ತುಪಡಿಸಿಕೊಂಡಂತಹ ಮಾಲುಗಳನ್ನೂ ಸಹ ಪೋಲೀಸಿನವರಿಗೆ ಕೊಟ್ಟಿರುತ್ತೇನೆ. ಸದರಿ ದೂರು ನಿಪಿ–2 ಹಾಗೂ

ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನಾನು ನೋಡಿದರೆ ಗುರುತಿಸಲು ಆಗುವುದಿಲ್ಲ.

(**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿರುವುದರಿಂದ ವಿಚಾರಣೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್